**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 29 ಟಿಇಸಿ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, 2ನೇ ಗೇಟ್, 6ನೇ ಮಹಡಿ,
ಬೆಂಗಳೂರು, ದಿನಾಂಕ:12-04-2019.

**ಹಿಂಬರಹ**

ವಿಷಯ:- ಶ್ರೀ ಬಿ.ಜಯರಾಜು, ಪ್ರಾಂಶುಪಾಲರು ಗ್ರೇಡ್-2, ತಾಂತ್ರಿಕ ಶಿಕ್ಷಣ ಇಲಾಖೆ ಇವರನ್ನು ನಿರ್ದೇಶಕರ ಹುದ್ದೆಗೆ ಪರಿಗಣಿಸುವ ಕುರಿತು.

ಉಲ್ಲೇಖ:- 1) ನಿರ್ದೇಶಕರು, ತಾ.ಶಿ.ಇ ಇವರ ಪತ್ರ ಸಂಖ್ಯೆ: ಡಿಟಿಇ 22 ಇಎಸ್‌ಟಿ (1)ಎ /2018-19/3082, ದಿನಾಂಕ:16.02.2019.
2) ಶ್ರೀ ಬಿ.ಜಯರಾಜು ರವರ ದಿನಾಂಕ:21.08.2017ರ ಮನವಿ ಹಾಗೂ ಈ ಸಂಬಂಧ ಸ್ವೀಕೃತವಾದ ಗಣ್ಯರ ಮನವಿಗಳು.

>>><<<

ಶ್ರೀ ಬಿ. ಜಯರಾಜು, ಪ್ರಾಂಶುಪಾಲರು ಗ್ರೇಡ್-2 ಇವರು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರ ಹುದ್ದೆಗೆ ಪರಿಗಣಿಸುವಂತೆ ಸಲ್ಲಿಸಿರುವ ಮನವಿಗಳ ಬಗ್ಗೆ ಪರಿಶೀಲಿಸಲಾಯಿತು.

ಪ್ರಸ್ತುತ ಇಲಾಖೆಯಲ್ಲಿ ಜಾರಿಯಲ್ಲಿರುವ 2006ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಹುದ್ದೆಯನ್ನು ಪ್ರಾಂಶುಪಾಲರು ಗ್ರೇಡ್-2 ವೃಂದದ ಅಧಿಕಾರಿಗಳು ಜಂಟಿ ನಿರ್ದೇಶಕರು ಹುದ್ದೆಯಲ್ಲಿ ಕನಿಷ್ಠ ಒಂದು ವರ್ಷದ ಸೇವೆಯನ್ನು ಪೂರೈಸಿರುವ ಹಿರಿಯರಾದವರಲ್ಲಿ ಅರ್ಹರನ್ನು ಆಯ್ಕೆ ಮೂಲಕ ಸ್ಥಳ ನಿಯುಕ್ತಿಗೊಳಿಸಲು ಅವಕಾಶ ಕಲ್ಪಿಸಲಾಗಿದೆ.

ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಶ್ರೀ ಬಿ. ಜಯರಾಜು, ಪ್ರಾಂಶುಪಾಲರು ಗ್ರೇಡ್-2 ಇವರು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಜಂಟಿ ನಿರ್ದೇಶಕರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲ. ಪ್ರಸ್ತುತ ಪ್ರಾಂಶುಪಾಲರು ಗ್ರೇಡ್-2 ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಜೇಷ್ಠತೆಯಲ್ಲಿ ಕಿರಿಯರಾಗಿರುತ್ತಾರೆ ಹಾಗೂ ನಿಯಮಗಳನ್ವಯ ಅರ್ಹರಿರುವುದಿಲ್ಲ. ಅಲ್ಲದೆ ಪ್ರಸ್ತುತ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಹುದ್ದೆ ಸಹ ಖಾಲಿಯಿರುವುದಿಲ್ಲವಾದ್ದರಿಂದ ಉಲ್ಲೇಖಿತ ಮನವಿಯನ್ನು ಪರಿಗಣಿಸಲು ಪ್ರಸ್ತುತದಲ್ಲಿ ಬರುವುದಿಲ್ಲವೆಂದು ತಿಳಿಸಿದೆ.

12/4/19

(ಮನೋರಮ ಡಿ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಗೆ,

ಶ್ರೀ.ಬಿ. ಜಯರಾಜು, ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

JD (Admn)/ADD/
ಪ್ರತಿ:

ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು

E-Gov

dte website

16/4/XIX

Scanned by CamScanner